# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: **969** |
| ಸದಸ್ಯರ ಹೆಸರು | :: ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ |
| ಉತ್ತರಿಸುವ ದಿನಾಂಕ | :: 28.12.2022 |
| ಉತ್ತರಿಸುವ ಸಚಿವರು | :: ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1) | ಸರ್ಕಾರ/ಪುರಸಭೆ/ನಗರಸಭೆಯಿಂದ ದಾವಣಗೆರೆ ಜಿಲ್ಲೆ, ಹರಿಹರ ನಗರದ ಶ್ರೀ ರಾಘವೇಂದ್ರ ಮಠ ಟ್ರಸ್ಟ್/ ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನಕ್ಕೆ ಭೂಮಿ/ನಿವೇಶನಗಳನ್ನು ಯಾವಾಗ ಮಂಜೂರು ಮಾಡಲಾಗಿದೆ; ಎಷ್ಟು ಅಳತೆಯ/ವಿಸ್ತೀರ್ಣದ ಭೂಮಿ ಮಂಜೂರು ಮಾಡಲಾಗಿದೆ; ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆ;ಮಂಜೂರು ಮಾಡಲಾದ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆಯೇ; ಅಥವಾ ಇಲ್ಲವೇ;(ಸಂಪೂರ್ಣ ವಿವರ ಒದಗಿಸುವುದು). | ದಾವಣಗೆರೆ ಜಿಲ್ಲೆ ಹರಿಹರ ನಗರದ ಶ್ರೀ ರಾಘವೇಂದ್ರ ಮಠ ಟ್ರಸ್ಟ್/ ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿದ ಭೂಮಿಯನ್ನು ಖಾಸಗಿಯವರಿಂದ ಖರೀದಿಸಲಾಗಿದೆ. ಸದರಿ ಮಠದ ಹೆಸರಿಗೆ ರಿ.ಸ.ನಂ.10 ರಲ್ಲಿ 1-38 ಎಕರೆ/ಗುಂಟೆ ಜಮೀನನ್ನು ಎಂ.ಆರ್-7/75-76 ಹೆಚ್ ಆರ್ ಆರ್ 692 ಹೆಚ್ ಎಂ ಆರ್ 2 ರಂತೆ ಹಾಗೂ ಎ.ಎಲ್.ಎನ್/6/76-77ರ ಪ್ರಕಾರ ಅಲಿನೇಷನ್ ಆಗಿರುತ್ತದೆ.<br>1. ನಗರಸಭೆ ಆಸ್ತಿ ನಂ.221/231 ರಲ್ಲಿ 25.00X9.10ಮೀ, 2-13 ಎಕರೆ/ಗುಂಟೆ ಜಾಗದಲ್ಲಿ ಶ್ರೀ ರಾಘವೇಂದ್ರಸ್ವಾಮಿ ಬೃಂದಾವನ ಹಾಗೂ ಮಾಲೀಕರ ಹೆಸರು ಅಧ್ಯಕ್ಷರು ಶ್ರೀ ರಾಘವೇಂದ್ರಸ್ವಾಮಿ ಬೃಂದಾವನ ಪ್ರತಿಷ್ಠಾಪನಾ ಸಮಿತಿ ಎಂದು ನಮೂದು ಇರುತ್ತದೆ.<br>2. ನಗರ ಸಭೆ ಆಸ್ತಿ ನಂ.222/232 ರಲ್ಲಿ 18.30X4.50ಮೀ ಜಾಗದಲ್ಲಿ ಬೃಂದಾವನ ಆಫೀಸ್, ಪಾಠಶಾಲೆ, ಗೋಶಾಲೆ ಎಂದು ನಮೂದು ಇರುತ್ತದೆ. ಮಾಲೀಕರ ಹೆಸರು ಹೋಳಿ ಮಠ ವಿಚಾರಣಾ ಕರ್ತರು ಎಂದು ನಮೂದು ಇರುತ್ತದೆ.<br>3. ನಗರಸಭೆ ಆಸ್ತಿ ನಂ.223/233 ರಲ್ಲಿ ಹಳೇಕಲ್ಲು ಮಂಟಪ ಹೋಳಿ ಮಠ ವಿಚಾರಣಾ ಕರ್ತು ಎಂದು ನಮೂದು ಇರುತ್ತದೆ. ಸದರಿ ಮಠವು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಖಾಸಗಿ ಸಂಸ್ಥೆಯಾಗಿರುತ್ತದೆ. |

.......2

| | | |
|---|---|---|
| 2) | ಈ ಶ್ರೀ ರಾಘವೇಂದ್ರು ಮಠ ಟ್ರಸ್ಟ್/ಶ್ರೀ ರಾಘವೇಂದ್ರುಸ್ವಾಮಿ ದೇವಸ್ಥಾನ ಸಮಿತಿಯು ಖಾಸಗಿ ಟ್ರಸ್ಟ್ ಅಥವಾ ಸರ್ಕಾರಿ/ಅರೆ ಸರ್ಕಾರಿ ಸಮಿತಿಯೇ; ಈ ಸಮಿತಿ/ಟ್ರಸ್ಟ್ ನಲ್ಲಿ ಜನಪ್ರತಿನಿಧಿಗಳು/ಸರ್ಕಾರದ ಪ್ರತಿನಿಧಿಗಳಿದ್ದಾರೆಯೇ; ಸರ್ಕಾರದ ಮಾನದಂಡಗಳನ್ವಯ ಈ ಮಠವು ರಚನೆಯಾಗಿದೆಯೇ; ಆಡಳಿತ ಮಂಡಳಿಯ ಸದಸ್ಯರ ವಿವರ ಹಾಗೂ ಸದಸ್ಯರ ಅವಧಿ ಎಂದಿಗೆ ಮುಕ್ತಾಯವಾಗುತ್ತದೆ;(ಸಂಪೂರ್ಣ ವಿವರ ಒದಗಿಸುವುದು) | ಶ್ರೀ ರಾಘವೇಂದ್ರು ಮಠ ಟ್ರಸ್ಟ್ /ಶ್ರೀ ರಾಘವೇಂದ್ರುಸ್ವಾಮಿ ಸಮಿತಿಯು ಖಾಸಗಿಯಾಗಿದ್ದು, ಈ ಟ್ರಸ್ಟ್ ನೋಂದಣಿಯಾಗಿರುತ್ತದೆ. ಈ ಟ್ರಸ್ಟ್ ನಲ್ಲಿ ಸರ್ಕಾರಿ ಪ್ರತಿನಿಧಿಗಳಿರುವುದಿಲ್ಲ. ಈ ಟ್ರಸ್ಟನಲ್ಲಿರುವ ಸದಸ್ಯರ ವಿವರ ಈ ಕೆಳಕಂಡಂತಿರುತ್ತದೆ.<br><br>ಅಧ್ಯಕ್ಷರು- ಶ್ರೀ ಬಸವರಾಜ್.<br>ಉಪಾಧ್ಯಕ್ಷರು- ಶ್ರೀ ಹೆಚ್. ಎಸ್. ಸುಕುಮಾರ್<br>ಖಜಾಂಚಿ- ಶ್ರೀ ರಂಗನಾಥ. ಎಸ್.<br>ಧರ್ಮದರ್ಶಿಗಳಾದ ಶ್ರೀ ಸಂಪನ್ನ ಮುತಾಲಿಕ್, ಶ್ರೀ ಬಿ.ಎನ್. ನಾಗರಾಜ್, ಶ್ರೀ ಹೆಚ್. ಪಿ. ವಿಜಯ, ಶ್ರೀ ಶಿವಪ್ರಕಾಶ ಶಾಸ್ತ್ರೀ ಹಾಗೂ ಶ್ರೀ. ಮಂಜುನಾಥ ಕೆ.ಎನ್. ಇವರುಗಳು ಸದರಿ ಸಮಿತಿಯ ಸದಸ್ಯರುಗಳು ಆಗಿರುತ್ತಾರೆ. |
| 3) | ಶ್ರೀ ರಾಘವೇಂದ್ರು ಮಠ ಟ್ರಸ್ಟ್/ ಶ್ರೀ ರಾಘವೇಂದ್ರುಸ್ವಾಮಿ ದೇವಸ್ಥಾನ ಸಮಿತಿಗೆ ಯಾವ ಯಾವ ಯೋಜನೆಯಡಿ ಸರ್ಕಾರದಿಂದ ಶಾಸಕರ(ವಿಧಾನಸಭೆ ವಿಧಾನ ಪರಿಷತ್) ಸಂಸದರ (ಲೋಕಸಭೆ/ರಾಜ್ಯಸಭೆ)/ ಹರಿಹರ ಪುರಸಭೆಯ/ನಗರಸಭೆಯ ಅನುದಾನವನ್ನು ಯಾವ ಯಾವ ಉದ್ದೇಶಕ್ಕಾಗಿ ಹಾಗೂ ಎಷ್ಟು ಅನುದಾನವನ್ನು ಪಡೆಯಲಾಗಿದೆ;ಪಡೆಯಲಾಗಿರುವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆಯೇ; | ಶ್ರೀ ರಾಘವೇಂದ್ರು ಮಠ ಟ್ರಸ್ಟ್/ಶ್ರೀ ರಾಘವೇಂದ್ರುಸ್ವಾಮಿ ದೇವಸ್ಥಾನ ಸಮಿತಿಗೆ ಸರ್ಕಾರದಿಂದ ಈವರೆವಿಗೂ ಧಾರ್ಮಿಕ ದತ್ತಿ ಇಲಾಖೆಯಿಂದ ಯಾವುದೇ ಲೆಕ್ಕ ಶೀರ್ಷಿಕೆಯಡಿ ಅನುದಾನ ಮಂಜೂರಾಗಿರುವುದಿಲ್ಲ. ಉಳಿದ ಯೋಜನೆಗಳು ಈ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. |
| 4) | ಟ್ರಸ್ಟ್/ಸಮಿತಿಗೆ ಯಾವ ಯಾವ ಮೂಲದಿಂದ ಆದಾಯ ಬರುತ್ತದೆ; ಬಂದಂತಹ ಆದಾಯವನ್ನು ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ?(ಸಂಪೂರ್ಣ ವಿವರ ನೀಡುವುದು); | ಶ್ರೀ ಮಠಕ್ಕೆ ಭಕ್ತರು ನೀಡುವ ಕಾಣಿಕೆ ಸೇವೆಗಳಿಂದ ಅಪರ್ ಕರ್ಮ ಕಾರ್ಯಕ್ರಮಗಳಿಂದ ಆದಾಯವಿರುತ್ತದೆ. ಭಕ್ತರು ನೀಡುವ ಕಾಣಿಕೆಗಳಿಂದ ನಿತ್ಯ ಪೂಜೆ, ಗುರುಗಳ ಆರಾಧನೆ ಇನ್ನಿತರ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಗುತ್ತಿದೆ. |

**ಕಂಇ 121 ಎಲ್‌ಜಿಸಿ 2022**

**(ಆರ್. ಅಶೋಕ)**
**ಕಂದಾಯ ಸಚಿವರು**